ಹಾಸಿಗೆಗಳ ಸಂಖ್ಯೆಗೆ ಅನುಗುಣವಾಗಿ ಬೇಕಾದತಂತಹ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ಮಂಜೂರಾತಿ ಮಾಡುವುದು. Sanction of Medical and para medical staff and provision of budget according to the bed strength. ಈ ಒಂದು ನೀತಿಯನ್ನು ನೀವು ಮಾಡಿದರೆ ಎಲ್ಲಾ ಸಮಸ್ಯೆಗಳ ಗೊಂದಲಗಳು ನಿವಾರಣೆಯಾಗುತ್ತವೆ. ತಾವು ಮುಂದೆ ಬಜೆಟ್ ಮಾಡುವ ಸಂದರ್ಭದಲ್ಲಿ ಗಮನದಲ್ಲಿರಲಿ ಎಂದು ಸಲಹೆಯನ್ನು ಕೊಟ್ಟಿದ್ದೇನೆ.

**ಅಧ್ಯಕ್ಷರು:** ಯು.ಟಿ. ಖಾದರ್ ರವರೆ ತಾವು ಕೇಳಿ. ತಮ್ಮ ವಿಷಯ ಬೇರೆ ಇದೆ, ಅದನ್ನು ಕೇಳಿ.

2) **ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಕೆಲವು ವ್ಯಕ್ತಿಗಳು ವಿನಾಕರಣ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡುತ್ತಿರುವುದರಿಂದ ಕಾನೂನು ಸುವ್ಯವಸ್ಥೆಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ.**

**ಶ್ರೀ ಯು. ಟಿ. ಖಾದರ್:** ಮಾನ್ಯ ಅಧ್ಯಕ್ಷರೆ, ನಾನು ಬಹಳಷ್ಟು ಬೇಸರದಿಂದ ಇದನ್ನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಪ್ರಚೋದನಾಕಾರಿ ಭಾಷಣವನ್ನು ಮಾಡುವ ಮೂಲಕ ಇವತ್ತು ಸಮಾಜದಲ್ಲಿ ಭಂಗ ತರುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ಯಾವುದೇ ರೀತಿಯಲ್ಲಿ ಕಡಿವಾಣ ಹಾಕಬೇಕೆಂದು ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಸುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:** ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು Council ನಲ್ಲಿದ್ದಾರೆ, ಇದಕ್ಕೆ ಗೃಹ ಮಂತ್ರಿಗಳು ಬಂದಮೇಲೆ ಉತ್ತರ ಕೊಡುತ್ತಾರೆ.

**ಅಧ್ಯಕ್ಷರು:** ಆಯಿತು.

**ಶ್ರೀ ಯು. ಟಿ. ಖಾದರ್:** ನಾನು ಏಕೆ ಬಹಳಷ್ಟು ಬೇಸರವನ್ನು ವ್ಯಕ್ತಪಡಿಸುತ್ತೇನೆಂದರೆ

**ಶ್ರೀ ಜಗದೀಶ್ ಶೆಟ್ಟರ್:** ನಿಮಗೆ ಕೇಳುವುದಕ್ಕೆ ಅವಕಾಶವಿದೆ, ನೀವು ಗೃಹ ಮಂತ್ರಿಗಳು ಬಂದ ತಕ್ಷಣ ಕೇಳಿ, ಅವರು ಬರುತ್ತಾರೆ.

**ಶ್ರೀ ಯು. ಟಿ. ಖಾದರ್:** ನಮ್ಮ ಜಿಲ್ಲೆಯವರಾದ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

**ಶ್ರೀ ಜಗದೀಶ್ ಶೆಟ್ಟರ್:** ಅವರು ಬರುತ್ತಾರೆ, ಆ ಮೇಲೆ ಚರ್ಚೆ ಮಾಡಿ

**ಅಧ್ಯಕ್ಷರು:** ಮಧ್ಯಾಹ್ನದ ಮೇಲೆ ಕೇಳಿ

**ಶ್ರೀ ಜಗದೀಶ್ ಶೆಟ್ಟರ್:** ಇದಕ್ಕೆ time ಕೇಳುತ್ತಿಲ್ಲ. ಗೃಹ ಮಂತ್ರಿಗಳು Council ನಲ್ಲಿದ್ದಾರೆ, ಅವರು ಬಂದ ತಕ್ಷಣ ಉತ್ತರ ಕೊಡುತ್ತಾರೆ.

**ಅಧ್ಯಕ್ಷರು:** ಉತ್ತರ ಕೊಡಿಸುತ್ತೇನೆ. ಈಗ ಆರ್. ನರೇಂದ್ರರವರೆ, ತಾವು ಕೇಳಿ.

**2) ವಿಷಯ: ದಿನಾಂಕ 23–01–2012 ರಂದು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಬೋಳೇಗೌಡನ ದೊಡ್ಡಿ ಗ್ರಾಮದಲ್ಲಿ ಐದು ಜನ ಒಂದೇ ಕುಟುಂಬದ ಸದಸ್ಯರು ಕೃಷಿ ಸಾಲದಿಂದಾಗಿ ಬೇಸತ್ತು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದು ಹಾಗೂ ಆ ಕುಟುಂಬದಲ್ಲಿ ಉಳಿದಿರುವ ಏಕೈಕ ಸದಸ್ಯನಾದ ಅವರ ಮಗನಿಗೆ ಸರ್ಕಾರದಿಂದ ಅವರ ಸಾಲ ತೀರಿಸಲು ಹಾಗೂ ಜೀವನಕ್ಕೆ ಪರಿಹಾರ ನೀಡುವ ಬಗ್ಗೆ.–**

**ಶ್ರೀ ಆರ್. ನರೇಂದ್ರ:** ಮಾನ್ಯ ಅಧ್ಯಕ್ಷರೆ, ದಿನಾಂಕ 23–02–2012 ರಂದು ಬೋಳೇಗೌಡನ ದೊಡ್ಡಿ ಗ್ರಾಮದಲ್ಲಿ ಮುಸ್ಲಿಂ ಸಮುದಾಯದ ಐದು ಜನ ತಂದೆ ತಾಯಿ ಮತ್ತು ಮೂರು ಜನ ವಯಸ್ಸಿಗೆ ಬಂದಿರುವಂತಹ ಮಕ್ಕಳು ಕೃಷಿಗೆ ಮಾಡಿದಂತಹ ಸಾಲವನ್ನು ತೀರಿಸಲಾರದೆ ಎಲ್ಲರೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದಾರೆ. ಆದರೆ ಅವರ ಏಕೈಕ ಮಗ ಉಳಿದುಕೊಂಡಿದ್ದಾನೆ. ಅವನು ಬಡ ಕೃಷಿಕನಾದ್ದರಿಂದ ಸರ್ಕಾರದಿಂದ ಅವನಿಗೆ ಏನಾದರೂ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ photo ನೋಡಿದರೆ ಐದು ಜನ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗುತ್ತದೆ.